# ಶರ್ಮಿಳಾರನ್ನು ರಕ್ಷಿಸಿ! ಪ್ರಜಾಸತ್ತೆಯನ್ನು ಉಳಿಸಿ!

# AFSPA

## ಭಾರತ ಸೇನೆಯ ವಿಶೇಷ ಅಧಿಕಾರ ಕೊನೆಯಾಗಲಿ

ಈ ತಿಂಗಳ ನವೆಂಬರ್ 4ರಂದು, ಮಣಿಪುರದ ಕವಯಿತ್ರಿ ಇರೋಮ್ ಶರ್ಮಿಳಾ ಚಾನುರವರ ಉಪವಾಸ ಸತ್ಯಾಗ್ರಹಕ್ಕೆ ಹನ್ನೊಂದು ತುಂಬಿತು. ಅಂದಿನಿಂದ ಇಂದಿನವರೆಗೆ ಈ ಅಪ್ರತಿಮ ಹೋರಾಟಗಾರ್ತಿ ಯಾವುದೇ ಆಹಾರ-ಪಾನೀಯಗಳನ್ನು ಮುಟ್ಟಿಲ್ಲ, ಆಕೆಯನ್ನು ಆತ್ಮಹತ್ಯೆಗೆ ಪ್ರಯತ್ನಪಟ್ಟ ಆರೋಪದ ಮೇಲೆ ಬಂಧನದಲ್ಲಿರಿಸಿ, ಬಲವಂತದಿಂದ ಮೂಗಿನ ಮೂಲಕ ದ್ರವವನ್ನು ನೀಡಲಾಗುತ್ತಿದೆ. ಜಗತ್ತಿನ ಯಾವುದೇ ದೇಶದ ಹೋರಾಟದ ಚರಿತ್ರೆಯಲ್ಲು ಈ ಮಟ್ಟದ ಸುಧೀರ್ಘ ಅಖಂಡ ಉಪವಾಸ ಹಾಗು ನೋವುಂಡಿರುವ ಹೋರಾಟಗಾರ/ಗಾರ್ತಿಯರ ನಿದರ್ಶನವಿಲ್ಲ. ಇಂದು ಇರೋಮ್ ಶರ್ಮಿಳಾ ಜಾಗತಿಕ ಮಟ್ಟದಲ್ಲಿ ನ್ಯಾಯಕ್ಕಾಗಿ ನಡೆವ ಹೋರಾಟದ ವಿಶಿಷ್ಟ ಪ್ರತೀಕವಾಗಿದ್ದಾರೆ.

### ಈ ಹೋರಾಟಕ್ಕೆ ಕಾರಣವೇನು?

ಶರ್ಮಿಳಾರದ್ದು ಸರಳ ಹಾಗು ಮಾನವೀಯ ಬೇಡಿಕೆ: ಸೇನೆಗೆ ನೀಡಿರುವ ವಿಶೇಷ ಅಧಿಕಾರ ನೀಡಿರುವ AFSPA ಕೊನೆಗೊಳಿಸಿ AFSPA ಯ ದೌರ್ಜನ್ಯ ಕೇವಲ ಮಣಿಪುರಕ್ಕೆ ಸೀಮಿತವಾಗಿಲ್ಲ, ಇಡೀ ಈಶಾನ್ಯ ರಾಜ್ಯಗಳು ಹಾಗು ಕಾಶ್ಮೀರ ಕಣಿವೆಯಲ್ಲೂ ಈ ಕಾಯಿದೆಯಿಂದಾಗಿ ಅಲ್ಲಿನ ಅಮಾಯಕ ಜನಸ್ತೋಮ ತತ್ತರಿಸಿದೆ. AFSPA ವಿಶೇಷ ಅಧಿಕಾರದಿಂದಾಗಿ ಸೇನಾ ಪಡೆಗಳು ಕೇವಲ ಸಂದೇಹ ಮಾತ್ರಕ್ಕೆ ಯಾರ ಮನೆಗಾದರೂ ನುಗ್ಗಿ ದಾಂಧಲೆ ಎಬ್ಬಿಸಿ, ಬಂಧಿಸುವ ಗುಂಡಿಕ್ಕಿ ಕೊಲ್ಲುವ ಅಮಾನುಷ ಬಲವನ್ನು ಪಡೆದಿದೆ. ಸೇನಾ ಪಡೆಗಳಿಗೆ ಯಾವುದೇ ಅಪಾಯ ವಿಲ್ಲದಿದ್ದರೂ ಈ ರೀತಿಯ ಕ್ರೂರ ಬಲದಿಂದಾಗಿ, ಅಲ್ಲಿನ ಮಹಿಳೆ, ಎಳೆಯರು ಹಾಗು ತರುಣ–ತರುಣಿಯರು ಲೈಂಗಿಕ ದೌರ್ಜನ್ಯ ಹಾಗು ಬಲಾತ್ಕಾರಗಳಿಗೆ ತುತ್ತಾಗುತ್ತಲೇ ಇದ್ದಾರೆ. ಈ ವಿಶೇಷ AFSPA ಕಾಯಿದೆ ಯಿಂದಾಗಿ, ಇಲ್ಲಿ ಭಾರತದ ಸೇನೆಯ ಕ್ರೌರ್ಯವನ್ನು ಪ್ರಶ್ನಿಸುವ ಹಾಗು ನ್ಯಾಯ ಕೇಳುವ ಯಾವುದೇ ಶಾಸನಬದ್ಧ ಮಾರ್ಗಗಳೂ ಇಲ್ಲವಾಗಿದೆ. ಇದರಿಂದಾಗಿ, "ಕಾಣೆಯಾಗುವಿಕೆ", ಬಂಧನದಲ್ಲಿ ಹಿಂಸೆ, ಬಲಾತ್ಕಾರ, ದರೋಡೆ ಹಾಗು ಎನ್‌ಕೌಂಟರ್ ಸಾವುಗಳು ದಿನನಿತ್ಯ ನಡೆಯುವ ಸಾಮಾನ್ಯ ಸಂಗತಿಯಾಗಿದೆ. ಇರೋಮ್ ಶರ್ಮಿಳಾ ಈ ರೀತಿಯ ದೌರ್ಜನ್ಯದ ಪ್ರತ್ಯಕ್ಷದರ್ಶಿ, 2000 ನವೆಂಬರ್ 2ರಂದು ಭಾರತದ ಸೇನೆ ಮಾಲೋಮ್ ಪಟ್ಟಣದಲ್ಲಿ ನಡೆಸಿದ 10 ಜನರ ಕಗ್ಗೊಲೆಯ ವಿರುದ್ಧ ಸೆಟೆದು "AFSPA ಕೊನೆಗೊಳಿಸಿ" ಎಂಬ ಬೇಡಿಕೆ ಮುಂದಿಟ್ಟು ಉಪವಾಸ ಸತ್ಯಾಗ್ರಹ ಆರಂಭಿಸಿದರು.

### ಅಮಾಯಕ ಜನರ ಜೀವ ಉಳಿಸಲಿಕ್ಕಾಗಿ ಈ ಹೋರಾಟವನ್ನು ಬೆಂಬಲಿಸಿ

ಧೀರ್ಘಕಾಲದ AFSPA ಅಮಾನುಷ ಕಾಯಿದೆಯಿಂದಾಗಿ, ಮಣಿಪುರ, ಈಶಾನ್ಯ ರಾಜ್ಯಗಳ ಮತ್ತು ಕಾಶ್ಮೀರದ ಅಮಾಯಕ ಜನತೆ ನಾನ್ಯಾರು ಕೇಳರಿಯದ ದೌರ್ಜನ್ಯ ಹಾಗು ಕ್ರೌರ್ಯಗಳಿಗೆ ಶಿಕಾರಿ ಯಾಗುತ್ತಿದ್ದಾರೆ. ಬೆಂಗಳೂರು ಸೇರಿದಂತೆ, ನಾಡಿನಾದ್ಯಂತ ಶರ್ಮಿಳಾರವರನ್ನು ಬೆಂಬಲಿಸಿ AFSPA ವಿರುದ್ಧ ಹಲವಾರು ಪ್ರತಿಭಟನೆಗಳು ನಡೆದಿವೆ. ಶರ್ಮಿಳಾರವರ ಸತ್ಯಾಗ್ರಹ ಮತ್ತು ಉಪವಾಸ ಈಗಾಗಲೆ 12ನೇ ವರುಷಕ್ಕೆ ಕಾಲಿಟ್ಟಿದೆ, ಅವರನ್ನು ಬೆಂಬಲಿಸಿ ಹಾಗು AFSPA ಹಿಮ್ಮೆಟ್ಟುವುದಕ್ಕಾಗಿ ನಮ್ಮ ಹೋರಾಟದ ಪ್ರಯತ್ನಗಳು ಇಮ್ಮಡಿಗೊಂಡು ತೀವ್ರವಾಗಬೇಕಿದೆ. ಈಶಾನ್ಯದ ಮಣಿಪುರ ಹಾಗು ಇನ್ನಿತರ ರಾಜ್ಯಗಳಲ್ಲಿ ಮತ್ತು ಕಾಶ್ಮೀರಗಳಲ್ಲಿ ದಮನ ಮಾಡುತ್ತಿರುವ AFSPA ಪೋಷಿತ ಸೇನೆಗೆ ಖರ್ಚಾಗುತ್ತಿರುವ ಹಣ, ನಮ್ಮ–ನಿಮ್ಮಂದ ವಸೂಲದ ಟ್ಯಾಕ್ಸ್ ದುಡ್ಡಿನಿಂದಲೇ, ಈ ಪ್ರದೇಶಗಳಿಂದ ಹೊರಗಿರುವ ನಮ್ಮೆಲ್ಲರ ಅಕ್ಷಮ್ಯ ಅಪರಾಧವಾದ ಮೌನಪ್ರೇಕ್ಷಕ ಪ್ರವೃತ್ತಿಯಿಂದಾಗಿ, ಇಂದು 12 ವರುಷಗಳ ಉಪವಾಸದ ಧೀರ್ಘ ಶಿಕ್ಷೆಯನ್ನು ಶರ್ಮಿಳಾರವರು ಅನುಭವಿಸುತ್ತಿದ್ದಾರೆ. ಮೌನವನ್ನು ಮುರಿವ ಕಾಲ ಇದೀಗ ಬಂದಿದೆ, ನಮ್ಮೆಲ್ಲರ ಒಕ್ಕೊರಲಿನ ಕೂಗು ದೆಹಲಿಯ ಸರ್ಕಾರವನ್ನು ಬಡಿದೆಬ್ಬಿಸಬೇಕಿದೆ. ಬನ್ನಿ, ನವೆಂಬರ್ 26ರಂದು ಸಂಜೆ 4ಕ್ಕೆ ಬೆಂಗಳೂರಿನ ಟೌನ್‌ಹಾಲ್ ಬಳಿ ನಡೆಯುವ AFSPA

**ಪ್ರಜಾಸತ್ತೆಯ ಎಲ್ಲಾ ಮೌಲ್ಯಗಳನ್ನು ಅವಮಾನಿಸುವ, ಭಾರತ ಸೇನೆಯ AFSPA ಒಂದು ಜನವಿರೋಧಿ ಕಾನೂನು.**

**AFSPA ಕೊನೆಯಾಗಲೇಬೇಕು.**

**26 ನವೆಂಬರ್ 2011, ಬೆಂಗಳೂರಿನ ಜನಸಮುದಾಯಗಳು ಸತ್ಯಾಗ್ರಹಿ ಶರ್ಮಿಳಾ ಇರೋಮ್ ಚಾನುರವರನ್ನು ಬೆಂಬಲಿಸಿ, AFSPA ವಿರೋಧಿ ದಿನವನ್ನಾಗಿ ಆಚರಿಸೋಣ. ಸ್ವಾತಂತ್ರ್ಯ, ಸಮಾನತೆ ಮತ್ತು ಪ್ರಜಾತಂತ್ರವನ್ನು ಪ್ರೀತಿಸುವ ಎಲ್ಲಾ ವಿದ್ಯಾರ್ಥಿಗಳು, ನಾಗರೀಕ ಸಮಾಜ, ಪ್ರಗತಿಪರ ಗುಂಪುಗಳು, ಮಾನವ ಹಕ್ಕು ಸಂಘಟನೆಗಳು ಮತ್ತಿತರ ಎಲ್ಲಾ ಸಹೃದಯರನ್ನೂ ಈ AFSPA ಕೊನೆಗೊಳಿಸಿ ಹೋರಾಟವನ್ನು ಬೆಂಬಲಿಸುವಂತೆ ಆಗ್ರಹಿಸುತ್ತೇವೆ. 26 ನವೆಂಬರ್ 2011ರಂದು ಬನ್ನಿ, ಗೆಳೆಯರೊಂದಿಗೆ, ನಿಮ್ಮ ಹೋರಾಟದ ಹಾಡು-ಸಂಗೀತದೊಂದಿಗೆ, ಭಿತ್ತಿಪತ್ರ-ಬ್ಯಾನರ್ ಮತ್ತೆಲ್ಲಾ ಕ್ರಿಯಾಶೀಲತೆಯಿಂದ AFSPAಯನ್ನು ವಿರೋಧಿಸಿ.**


Peoples' Solidarity Concerns - Bangalore

peoplesconcerns@gmail.com

ವಿವರಗಳಿಗೆ : 09448394365, 09845453614, 09686733127, 09448367627, 09886126064


## ಸೇನೆಯ ದೌರ್ಜನ್ಯಕಾರಿ AFSPA ವಿರುದ್ಧ ಬೆಂಗಳೂರು ಜನಸಮುದಾಯಗಳ ಹೋರಾಟ

**26th November, Town Hall, Bangalore @ 4pm**